ಓ.ಎಸ್.185/2021 ಡಿ.ಡಬ್ಲು-3
*ಮಲ್ಲಮ್ಮ ಗಂಡ ಹನುಮಪ್ಪ*

ದಿ.09-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎ.ಎ.ಜಿ ವಕೀಲರಿಂದ:-**

2ನೇ ಪ್ರತಿವಾದಿ ನನ್ನ ನಾದಿನಿ. 1ನೇ ಪ್ರತಿವಾದಿ ನನ್ನ ಅತ್ತೆ. ನಾನು ಹನುಮಪ್ಪನ ಹೆಂಡತಿ. ನಾನು ಸುಮಾರು 10-15 ವರ್ಷಗಳಿಂದ ನಮ್ಮ ಅತ್ತೆ, ಗಂಡ ಮತ್ತು ನಾದಿನಿಯಿಂದ ದೂರ ವಾಸವಾಗಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುವದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಗಂಡ 30 ವರ್ಷಗಳ ಹಿಂದೆ ನಮ್ಮನ್ನು ಮನೆಯಿಂದ ಹೊರ ಹಾಕಿರುತ್ತಾನೆ ಎಂದು ಬರೆಯಿಸಿರುತ್ತೇನೆ. ನನ್ನನ್ನು ಮತ್ತು ಪ್ರತಿವಾದಿ ನಂ.3 ರಿಂದ 6 ರವರನ್ನು ಹೊರ ಹಾಕಿರುತ್ತಾರೆ. 30 ವರ್ಷಗಳಿಂದ ಹನುಮಪ್ಪನ ಜೊತೆ ಸಂಸಾರ ಮಾಡಿರುವುದಿಲ್ಲ. ಈ 30 ವರ್ಷದ ಅವಧಿಯಲ್ಲಿ ನನ್ನ ಗಂಡ ಹನುಮಪ್ಪ ಆಸ್ತಿಗಳನ್ನು ಏನೇನು ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ನಮ್ಮ ಅತ್ತೆ ತನ್ನ ಮತ್ತು ತನ್ನ ಮಗನ ಹೆಸರಿನಲ್ಲಿರುವ ಆಸ್ತಿಗಳನ್ನು ಏನು ಮಾಡಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಮತ್ತು ನನ್ನ ಗಂಡನಿಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದರೆ ಸುಮಾರು 32 ಎಕರೆ ಆಸ್ತಿ ಇತ್ತು. ಎಷ್ಟು ಸರ್ವೆ ನಂಬರಗಳು ಇದ್ದವು ಮತ್ತು ಎಷ್ಟು ಪಟ್ಟಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಯಾರು ಯಾರಿಗೆ ಎಷ್ಟು ಜಮೀನು ಮಾರಾಟ ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ನಾನಾಗಲೀ ನನ್ನ ಮಕ್ಕಳಾಗಲೀ ತಕರಾರು ಮಾಡಲು ಹೋಗಿರುವುದಿಲ್ಲ.

2. 28 ವರ್ಷಗಳ ಹಿಂದೆ ಯಾರು ಯಾರ ಮೇಲೆ ಏನು ಕೇಸು ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಓ.ಎಸ್.ನಂ.40/1998 ಕೇಸಿನ ಬಗ್ಗೆ ನನಗೆ ಗೊತ್ತಿಲ್ಲ. ಅದರಲ್ಲಿ ನಾನು ಪಕ್ಷಕಾರಳಾಗಿ ಇರುವುದಿಲ್ಲ. ನನ್ನ ಗಂಡನ ಜಮೀನಿನಲ್ಲಿ ಏನು ಬಿತ್ತುತ್ತಿದ್ದರು ಏನು ಬೆಳೆಯುತ್ತಿದ್ದರು ಎಂದು ನನಗೆ ಮಾಹಿತಿ ಇಲ್ಲ. ನನ್ನ ಗಂಡ ನಮ್ಮನ್ನು ಹೊರ ಹಾಕಿದ್ದರು. ನನ್ನ ಗಂಡ ಮನೆಯಿಂದ ಹೊರ ಹಾಕಿದ ನಂತರ ಅವರ ಕುಟುಂಬದಲ್ಲಿ ಯಾವ-ಯಾವ ವ್ಯವಹಾರ ಆಗಿವೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ತೀರಿಕೊಂಡು 10 ವರ್ಷವಾಗಿರುತ್ತದೆ. ಈ 10 ವರ್ಷಗಳಲ್ಲಿ ನನ್ನ ಗಂಡನ ಮನೆಯವರಿಗೆ ಆಸ್ತಿ ಕೊಡಿ ಎಂದು ನಾನು ಕೇಳಿರುವುದಿಲ್ಲ. ನನ್ನ ಮಗ ಶಿವಶಂಕರ ಬಂದು ಈ ಕೇಸಿನಲ್ಲಿ ಸಾಕ್ಷಿ ಹೇಳಲು ಕರೆದಿದ್ದಕ್ಕೆ ಬಂದಿರುತ್ತೇನೆ ಎಂದರೆ ಸರಿ. ವಾದಿ ವೆಂಕಟೇಶ ಮತ್ತು ಇತರರು ಯಾರು ಎಂದು ನನಗೆ ಗೊತ್ತಿಲ್ಲ. ನಮ್ಮ

ಮಕ್ಕಳು ಆಸ್ತಿ ಮಾರಾಟ ಮಾಡುತ್ತಿದ್ದಾರೆ ಎಂದು ಹೇಳಿದ್ದಕ್ಕೆ ನಾನು ಸಾಕ್ಷಿ ಹೇಳಲು ಬಂದಿದ್ದೇನೆ. ಅದನ್ನು ಬಿಟ್ಟು ಬೇರೆ ಏನೂ ನನಗೆ ಗೊತ್ತಿಲ್ಲ.

**<u>ಪಾಟೀ ಸವಾಲು ಶ್ರೀ ವಿ.ಜೆ.ಕೆ ವಕೀಲರಿಂದ:-</u>**

ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.